1464(783) ಶ್ರೀ ಒಲೇಕಾರ್ ನೆಹರು ಚನ್ನಬಸಪ್ಪ (ಬ್ಯಾಡಗಿ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಸಮ್ಮೇಳನಗಳನ್ನು ನಡೆಸಲು ಯಾವ ಯಾವ ಸಂಸ್ಥೆಗಳಿಗೆ ಎಷ್ಟೆಷ್ಟು ಧನಸಹಾಯ ಮಾಡಲಾಗಿದೆ;

ಆ) ಈ ಸಮ್ಮೇಳನಗಳ ಪೈಕಿ ಕೃಷಿ ಸಮ್ಮೇಳನ, ಪಂಚಾಯತ್ ರಾಜ್ ಸಮ್ಮೇಳನ ಮತ್ತು ಸಹಕಾರ ಸಮ್ಮೇಳನ ನಡೆಸಲು ಎಷ್ಟೆಷ್ಟು ಧನಸಹಾಯ ಮಾಡಲಾಗಿದೆ;

ಇ) ಈ ಸಮ್ಮೇಳನಗಳನ್ನು ನಡೆಸಿದ ಸಂಸ್ಥೆಗಳು ಮಾಡಿದ್ದ ಖರ್ಚು, ಜಮಾ ಖರ್ಚಿನ ವಿವರಗಳನ್ನು ಸರ್ಕಾರಕ್ಕೆ ಸಲ್ಲಿಸಿವೆಯೇ;

ಈ) ಇಲ್ಲವಾದಲ್ಲಿ, ಆ ಬಗ್ಗೆ ಸರ್ಕಾರದ ಕ್ರಮಗಳೇನು?

ಶ್ರೀ ಕೆ.ಶ್ರೀನಿವಾಸಗೌಡ (ಕೃಷಿ ಸಚಿವರು):

ಅ) 2002ನೇ ಸಾಲಿನಲ್ಲಿ ಸರ್ಕಾರಿ ಸ್ವಾಮ್ಯದ KEPPEC ಸಂಸ್ಥೆಗೆ Food Tech 2000ರ ಆ ಯೋಜನೆಗಾಗಿ ಕೃಷಿ ಇಲಾಖೆಯ ವತಿಯಿಂದ ಧನ ಸಹಾಯ ನೀಡಲಾಗಿದೆ.

ಆ) ಇದಕ್ಕಾಗಿ 18,17,971 ರೂ.ಗಳ ಧನ ಸಹಾಯ ನೀಡಲಾಗಿದೆ.

ಇ) ಸಲ್ಲಿಸಿದೆ.

ಈ) ವಿವರಗಳನ್ನು ಸಲ್ಲಿಸಿರುವುದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆಯು ಉದ್ಭವಿಸುವುದಿಲ್ಲ.

1465(1410) ಶ್ರೀ ಪದ್ಮನಾಭ ಕೊಟ್ಟಾರಿ.ಕೆ (ವಿಟ್ಲ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗ್ರಾಮೀಣ ಮತ್ತು ನಗರ ಪ್ರದೇಶದಲ್ಲಿನ ಬಡತನ ರೇಖೆಗಿಂತ ಕೆಳಗೆ ಇರುವ ಮತ್ತು ಮೇಲೆ ಇರುವ ಅರ್ಹ ಪಡಿತರ ಚೀಟಿ ಫಲಾನುಭವಿಗಳ ಸರ್ವೆ ಕಾರ್ಯಕ್ರಮವನ್ನು ಸರಕಾರ ಪ್ರಾರಭಿಸಿದೆಯೇ?

ಆ) ಪ್ರಾರಂಭಿಸಿದ್ದಲ್ಲಿ ಆ ಕಾರ್ಯ ಈಗ ಯಾವ ಹಂತದಲ್ಲಿದೆ?

ಇ) ಸದರಿ ಫಲಾನುಭವಿಗಳಿಗೆ ನಿಗದಿಪಡಿಸಿರುವ ಆದಾಯದ ಮೊತ್ತ ಎಷ್ಟು ಹಾಗೂ ಅದು ಬೆಲೆ ಏರಿಕೆ ಈ ಕಾಲದಲ್ಲಿ ಸಮಂಜಸವಾಗಿದೆಯೇ?

ಈ) ವೈಜ್ಞಾನಿಕವಾದ ಮತ್ತು ಬೆಲೆ ಏರಿಕೆಗೆ ಅನುಗುಣವಾದ ಆದಾಯ ಮಿತಿಯನ್ನು ನಿಗದಿಪಡಿಸಲು ಸರಕಾರದ ಕ್ರಮಗಳೇನು?

ಉ) ಗ್ರಾಮೀಣ ಪ್ರದೇಶದಲ್ಲಿ ಬಿಪಿಎಲ್ ಕಾರ್ಡ್‌ದಾರರಿಗೆ ಕನಿಷ್ಟ 20 ಸಾವಿರ ರೂಪಾಯಿಗಳ ಹಾಗೂ ಪಟ್ಟಣ ಪ್ರದೇಶಗಳಲ್ಲಿ ಕನಿಷ್ಟ ಮೂವತ್ತು ಸಾವಿರ ರೂಪಾಯಿಗಳ ಆದಾಯ ಮಿತಿಯನ್ನು ನಿಗದಿಪಡಿಸಲು ಸರಕಾರ ಕ್ರಮ ಜರುಗಿಸುವುದೇ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ಹೌದು.

ಆ) ಸರ್ಕಾರಿ ಆದೇಶ ಸಂಖ್ಯೆ: ಆನಾಸ 114 ಡಿಆರ್‌ಎ 2004, ದಿನಾಂಕ: 10-1-2005ರಲ್ಲಿ ರಾಜ್ಯದಲ್ಲಿ ಮನೆ-ಮನೆ ಪುನರ್ ಸಮೀಕ್ಷೆಯನ್ನು ಜನವರಿ 2005ರಿಂದ ಪ್ರಾರಂಭಿಸುವಂತೆ ಆದೇಶಿಸಿದ್ದು, ಅದರಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಪುನರ್‌ಸಮೀಕ್ಷೆ ಕ್ಯಾರ ನಡೆಸುವ ಬಗ್ಗೆ ಕೂಲಂಕುಷವಾಗಿ ತರಬೇತಿ ಕಾರ್ಯ ಮುಗಿಸಲಾಗಿದ್ದು, ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ರಚಿಸಲಾಗಿರುವ ಸಮೀಕ್ಷಾ ತಂಡಗಳಿಗೆ ತರಬೇತಿ ನೀಡುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಸಮೀಕ್ಷಾ ಕಾರ್ಯವು ಏಪ್ರಿಲ್, 2005ಕ್ಕೆ ಮುಕ್ತಾಯಗೊಳ್ಳಲಿದೆ.